ಸಿನಿಬಿಟ್ಸ್

ವಿಶಾಖ ಎನ್.


‘ಕಲ್ಕಿ’ ಸೈ–ಫೈ ಚಿತ್ರದಲ್ಲಿ ಪ್ರಭಾಸ್


‘ಗುಂಟೂರು ಕಾರಂ’ನಲ್ಲಿ ಮಹೇಶ್ ಬಾಬು

# ವರ್ಷದ ಮೊದಲಿಗೇ ನಿರೀಕ್ಷೆಯ ಪಟಾಕಿಗಳು

ಶಾರುಕ್ ಖಾನ್ ಸೋಲನ್ನು ಕೊಡವಿಕೊಂಡು ದೊಡ್ಡ ಮಟ್ಟದಲ್ಲಿ ಮೇಲೆದ್ದ ವರ್ಷದ ಕ್ಯಾಲೆಂಡರ್‌ನ ಪುಟಗಳು ಕಳೆದವು. 2024ರ ಹೊಸ ಕ್ಯಾಲೆಂಡರ್ ಮೇಲೆ ನೆಟ್ಟ ಸಿನಿಮಾಸಕ್ತರ ಕಣ್ಣುಗಳಿಗೆ ನಿರೀಕ್ಷೆಯ ಹೊಳಹುಗಳು ರಾಚುತ್ತಿವೆ. ಜನವರಿಯಲ್ಲಿಯೇ ‘ಕಲ್ಕಿ 2898 ಎಡಿ’, ‘ಗುಂಟೂರು ಕಾರಂ’ ತೆಲುಗು ಸಿನಿಮಾಗಳನ್ನು ಮುಂದಿಟ್ಟು, ಬಾಲಿವುಡ್‌ಗೆ ದಕ್ಷಿಣ ಭಾರತದ ಚಿತ್ರರಂಗ ಸೆಡ್ಡು ಹೊಡೆಯಲು ನಿಂತಿದೆ. ‘ಫೈಟರ್’ ಹಿಂದಿ ಚಿತ್ರದ ಪೋಸ್ಟರ್‌ನಲ್ಲಿನ ಹೃತಿಕ್ ರೋಷನ್ ತುಂಬು ಭುಜಗಳು, ದೀಪಿಕಾ ಪಡುಕೋಣೆ ಸಿಂಹಕಟಿ ದಕ್ಷಿಣದ ಸವಾಲಿಗೆ ಜವಾಬು ಆದೀತೆ ಎನ್ನುವುದು ಉಳಿದಿರುವ ಕುತೂಹಲ.

‘ಸಲಾರ್’ ಸಿನಿಮಾದಿಂದ ಸಂಚಲನ ಮೂಡಿಸಿರುವ ಪ್ರಭಾಸ್ ಗೆಲುವಿನ ಹಳಿಗೆ ಮರಳುವ ಕಾಲ ಬಂದಿತೆನ್ನುವುದು ಕೆಲವರ ಲೆಕ್ಕಾಚಾರ. ‘ಕಲ್ಕಿ 2898 ಎಡಿ’ ಸೈ–ಫೈ ಸಿನಿಮಾ. ಇದು ತೆಲುಗು, ಹಿಂದಿ ಎರಡೂ ಭಾಷೆಗಳಲ್ಲಿ ತಯಾರಾಗಿದೆ. ‘ಮಹಾನಟಿ’ಯಂತಹ ಗಟ್ಟಿ ತೆಲುಗು ಚಿತ್ರವನ್ನು ನಿರ್ದೇಶಿಸಿದ್ದ ನಾಗ್ ಅಶ್ವಿನ್ ಇದಕ್ಕೆ ಆ್ಯಕ್ಷನ್, ಕಟ್ ಹೇಳಿದ್ದಾರೆ. 600 ಕೋಟಿ ರೂಪಾಯಿಯಷ್ಟು ದೊಡ್ಡ ಬಜೆಟ್‌ನಲ್ಲಿ ಸಿದ್ಧಗೊಂಡಿರುವ ಈ ಸಿನಿಮಾದಲ್ಲಿ ಅಮಿತಾಭ್ ಬಚ್ಚನ್, ಕಮಲ ಹಾಸನ್, ದೀಪಿಕಾ ಪಡುಕೋಣೆ, ದಿಶಾ ಪಟಾನಿ, ಪಶುಪತಿ ಅಭಿನಯಿಸಿದ್ದಾರೆ. ಸಂತೋಷ್ ನಾರಾಯಣನ್ ಸ್ವರ ಸಂಯೋಜನೆಯ ಸಂಗೀತವಿದೆ. ಹೀಗಾಗಿ ಇದು ದಕ್ಷಿಣ ಭಾರತ–ಉತ್ತರ ಭಾರತದ ಪ್ರತಿಭೆಗಳ ಸಮ್ಮಿಶ್ರಣಕ್ಕೆ ಒಳ್ಳೆಯ ಉದಾಹರಣೆ. ಪ್ಯಾನ್ ಇಂಡಿಯಾ ಸಿನಿಮಾ ಪರಿಕಲ್ಪನೆಗೆ ರೆಕ್ಕೆಪುಕ್ಕ ಎಷ್ಟರಮಟ್ಟಿಗೆ ಮೂಡಿದೆ ಎನ್ನುವುದಕ್ಕೆ ಈ ಸಿನಿಮಾದ ದೊಡ್ಡ ಬಜೆಟ್ ಸಾಕ್ಷಿ.

ಜನವರಿ ಎರಡನೇ ವಾರದಲ್ಲೇ ‘ಗುಂಟೂರು ಕಾರಂ’ ತೆಲುಗು ಸಿನಿಮಾ ತೆರೆಕಾಣಲಿದೆ. ಸೂಪರ್ ಸ್ಟಾರ್ ಮಹೇಶ್ ಬಾಬು ನಾಯಕ, ತ್ರಿವಿಕ್ರಮ ಶ್ರೀನಿವಾಸ್ ನಿರ್ದೇಶಕ. ಶ್ರೀಲೀಲಾ, ಜಗಪತಿ ಬಾಬು, ರಮ್ಯಾ ಕೃಷ್ಣ, ಮೊದಲಾದವರು ತಾರಾಬಳಗದಲ್ಲಿ ಇರುವುದರಿಂದ ನಿರ್ದೇಶಕರು ಕುಟುಂಬದ ಗಟ್ಟಿ ಡ್ರಾಮಾ ಮಸಾಲೆಯನ್ನೇ ಅರೆದು ‘ಗುಂಟೂರು ಕಾರ’ ಸಿದ್ಧಪಡಿಸಿರುತ್ತಾರೆನ್ನುವುದನ್ನು ಸಾರುತ್ತದೆ. ಈ ಚಿತ್ರದ ಬಜೆಟ್ 200 ಕೋಟಿ ರೂಪಾಯಿ ಎಂಬ ಅಂದಾಜಿದೆ.

‘ಪಠಾಣ್’ ಸಿನಿಮಾ ಯಶಸ್ಸಿನಿಂದಾಗಿ ನಿರ್ದೇಶಕ ಸಿದ್ಧಾರ್ಥ್ ಆನಂದ್ ಮಾರುಕಟ್ಟೆ ಚೆನ್ನಾಗಿಯೇ ಕುದುರಿತು ಎನ್ನಬೇಕು. ಅಂತಹ ಸಂದರ್ಭದಲ್ಲಿಯೇ ‘ಫೈಟರ್’ ಚಿತ್ರ ಸೆಟ್ಟೇರಿದ್ದು. 250 ಕೋಟಿ ರೂಪಾಯಿಯಷ್ಟು ಬಂಡವಾಳದ ಈ ಸಿನಿಮಾ ಕೂಡ ಸಾಹಸಪ್ರಧಾನ ವಸ್ತುವನ್ನು ಒಳಗೊಂಡಿದೆ. ಹೃತಿಕ್ ರೋಷನ್, ದೀಪಿಕಾ ಪಡುಕೋಣೆ, ಅನಿಲ್ ಕಪೂರ್ ಅಭಿನಯವಿದ್ದು, 2024ರ ವರ್ಷ ಬಾಲಿವುಡ್ ಪಾಲಿಗೆ ಹೇಗಿರಲಿದೆ ಎನ್ನುವುದಕ್ಕೆ ಈ ಚಿತ್ರ ‘ಟೆಸ್ಟ್ ಡೋಸ್’ ಇದ್ದಂತೆ ಎಂದೇ ಭಾವಿಸಲಾಗಿದೆ.

ಇಂತಹ ದೊಡ್ಡ ಬಜೆಟ್‌ನ ಸಿನಿಮಾಗಳ ಕುರಿತು ಮಾತನಾಡುತ್ತಿರುವಾಗಲೇ, ‘ಮೆರ್ರಿ ಕ್ರಿಸ್‌ಮಸ್’ ಚಿತ್ರವು ನಿರ್ದೇಶಕ ಶ್ರೀರಾಮ್ ರಾಘವನ್ ಅವರ ಕಾರಣದಿಂದಾಗಿ ಕುತೂಹಲ ಮೂಡಿಸಿದೆ. ವಿಜಯ್ ಸೇತುಪತಿ ಎಲ್ಲಿ, ಕತ್ರಿನಾ ಕೈಫ್ ಎಲ್ಲಿ? ಈ ಇಬ್ಬರನ್ನೂ ತೆರೆಮೇಲೆ ಒಟ್ಟಾಗಿ ತರುವ ಆಲೋಚನೆಯನ್ನು ಶ್ರೀರಾಮ್ ರಾಘವನ್ ಮಾಡಿರುವುದೇ ಅವರ ಭಿನ್ನ ಆಲೋಚನೆಯನ್ನು ವ್ಯಕ್ತಪಡಿಸುತ್ತದೆ. ತಮಿಳು, ಹಿಂದಿ ಎರಡೂ ಭಾಷೆಗಳಲ್ಲಿ ಈ ಚಿತ್ರ ತೆರೆಗೆ ಬರುತ್ತಿದೆ. ಕ್ರಿಸ್‌ಮಸ್ ಸಂದರ್ಭದಲ್ಲೇ ಈ ಚಿತ್ರ ತೆರೆಕಾಣಬೇಕಿತ್ತು. ಕಾರಣಾಂತರಗಳಿಂದ ಮುಂದೂಡಿದ್ದರಿಂದ ಜನವರಿಯಲ್ಲಿ ಬಿಡುಗಡೆಯಾಗುತ್ತಿದೆ.

‘ನಟರಂಗ್’ ಮರಾಠಿ ಚಿತ್ರದಿಂದ ಜಾಗತಿಕ ಮಟ್ಟದಲ್ಲಿ ಗಮನಸೆಳೆದಿದ್ದ ರವಿ ಜಾಧವ್ ನಿರ್ದೇಶನದ ‘ಮೈ ಅಟಲ್ ಹೂಂ’ ವರ್ಷದ ಮೊದಲ ತಿಂಗಳೇ ತೆರೆಗೆ ಬರುತ್ತಿರುವ ಇನ್ನೊಂದು ಆಸಕ್ತಿಕರ ಸಿನಿಮಾ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನೇ ಕೇಂದ್ರಪಾತ್ರವಾಗಿ ಉಳ್ಳ ಚಿತ್ರವಿದು. ಲೋಕಸಭಾ ಚುನಾವಣೆಯು ಎದುರಲ್ಲಿ ಇರುವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವುದರಿಂದ ಈ ಚಿತ್ರವು ರಾಜಕೀಯ ದೃಷ್ಟಿಯಿಂದಲೂ ಮುಖ್ಯವಾಗಿದೆ. ವೆಬ್ ಸೀರೀಸ್‌ಗಳಿಂದ ಹೆಚ್ಚು ಜನಪ್ರಿಯರಾಗಿರುವ ಪಂಕಜ್ ತ್ರಿಪಾಠಿ ಈ ಚಿತ್ರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಪಾತ್ರದಲ್ಲಿ ನಟಿಸಿದ್ದಾರೆ. ಒಂದೂವರೆ ತಿಂಗಳಿನಷ್ಟು ಕಡಿಮೆ ಅವಧಿಯಲ್ಲೇ ಚಿತ್ರೀಕರಣ ಮುಗಿಸಿರುವ ಈ ಚಿತ್ರದ ಹೂರಣ ಏನು ಎನ್ನುವುದು ಗುಟ್ಟಾಗಿಯೇ ಇದೆ.

ರೋಹಿತ್ ಶೆಟ್ಟಿ ನಿರ್ದೇಶಿಸಿರುವ ‘ಸಿಂಗಂ ರಿಟರ್ನ್ಸ್’, ‘ಯೋಧ’ ರೀತಿಯ ಸಿನಿಮಾಗಳ ಪಟ್ಟಿ ನೋಡಿದರೆ, ಬಾಲಿವುಡ್ ಸಾಹಸಪ್ರಧಾನ ಚಿತ್ರಗಳನ್ನೇ ಹೆಚ್ಚಾಗಿ ನೆಚ್ಚಿಕೊಳ್ಳುತ್ತಿದೆ ಎನ್ನುವುದಂತೂ ಸ್ಪಷ್ಟ.

‘ಪುಷ್ಪಾ 2’, ‘ಇಂಡಿಯನ್ 2’ ಸಿನಿಮಾಗಳು ವರ್ಷದ ಮುಂದಿನ ಘಟ್ಟಗಳಲ್ಲಿ ಬಾಕ್ಸ್‌ಆಫೀಸ್‌ನಲ್ಲಿ ಸದ್ದು ಮಾಡುವ ನಿರೀಕ್ಷೆಯೂ ಇದ್ದು, ನೂರಾರು ಕೋಟಿ ರೂಪಾಯಿಯ ಲೆಕ್ಕಾಚಾರದ್ದೇ ಎಲ್ಲೆಡೆ ಮಾತು. ಅದರ ನಡುವೆಯೇ ಪಾ. ರಂಜಿತ್ ಅವರು ನಿರ್ದೇಶಿಸುತ್ತಿರುವ ಪೀರಿಯೆಡ್ ಡ್ರಾಮಾ ಉಳ್ಳ ‘ತಂಗಲಾನ್’ ಕೂಡ ಗಮನಸೆಳೆದಿದೆ. ■


‘ಫೈಟರ್’ ಚಿತ್ರದಲ್ಲಿ ಹೃತಿಕ್ ರೋಷನ್, ದೀಪಿಕಾ ಪಡುಕೋಣೆ